ಪಾಪದೋನು...' ಕೊನೆಯ ಪದದೊಂದಿಗೆ ನಾಲಿಗೆ ಕಚ್ಚಿಕೊಂಡಿದ್ದಳು ನಂದಿನಿ. ಅವನಿಗೆ ಅನಿವಾರ್ಯ ಆದಾಗಲೆಲ್ಲಾ ಕೈಸಾಲ ಕೇಳುವ ವಿಷಯ ಅಮ್ಮನಿಗೆ ಗೊತ್ತಾದರೆ ಮತ್ತೆ ಪಿತ್ಥ ಏರುತ್ತದೆ ಅವಳಿಗೆ. ಏನೋ ಪರಾಮೋಷಿ ಆಗುತ್ತಪ್ಪಾ. ಒಂದು ಹಳೇ ಸೀರೆ ಹರಿದರೆ ಅದಕ್ಕೆ ತಲೆ ತೆಗೆಯೋಕಾಗುತ್ತಾ? ಮೊದಲೇ ಹರಿದಿತ್ತು ಅನ್ನುತ್ತಾನಲ್ಲ ಅವನು? ಸುಳ್ಳು ಎಂದು ಸಾಧಿಸುವುದು ಹೇಗೆ? ಸತ್ಯವೂ ಇರಬಹುದು. ಅದೆಲ್ಲಾ ಹೇಳುವಂತಿಲ್ಲ ಅಮ್ಮನ ಬಳಿ. ಅವಳಿಗೆ ಅವಳು ಹೇಳಿದ್ದೇ ಪರಮಸತ್ಯ. ಆಗ, ಈಗ ಈ ವಿಷಯ ತೆಗೆದು ಕರ್ಕರೆ ಮಾಡುತ್ತಿದ್ದ ಅಮ್ಮ ಹರಿದ ಸೀರೆಯಿಂದ ಮೊಮ್ಮಗಳು ಚಂದದ ಚೂಡೀದಾರ ಹೊಲಿಸಿಕೊಂಡ ಮೇಲೆ ತಣ್ಣಗಾಗಿದ್ದಳು. ಇದೆಲ್ಲಾ ಕೆಲ ವರ್ಷಗಳ ಹಿಂದಿನ ಕತೆ. ಅಮ್ಮ ಈಗ ಮತ್ತಷ್ಟು ಹಣ್ಣಾಗಿದ್ದಾಳೆ. ದೈಹಿಕವಾಗಿ ಮಾತ್ರವಲ್ಲ, ಮಾನಸಿಕವಾಗಿಯೂ. ಏನೋ ಎಡವಟ್ಟಾದರೆ 'ಆಯ್ತು, ಹೋಯ್ತು' ಅನ್ನುವಂತಿಲ್ಲ. ಅದನ್ನೇ ಆಡಿ ಆಡಿ ರಗಳೆ ಹಿಡಿಸುತ್ತಾಳೆ...

ಮನೆ ಮುಂದಿನ ಸಣ್ಣ ಕೈತೋಟದಲ್ಲಿ ಒಂದಿಷ್ಟು ಹೂವಿನ ಗಿಡ ಬೆಳೆಸಿಕೊಂಡಿದ್ದಾಳೆ ನಂದಿನಿ. ದೇವರಪೂಜೆಗೆ ಅಮ್ಮನಿಗೆ ಪುಗಸಟ್ಟೆ ಹೂವು. ನಂದಿನಿಗೆ ಆಸೆಯಾದರೆ ಮುಡಿಯಲು ಜಡೆಗೆ ಪನ್ನೀರು ಗುಲಾಬಿ. ಗಿಡ ಅಂದ ಮೇಲೆ ಹಾವು, ಹರಣೆ, ಇಲಿ, ಹಲ್ಲಿ, ಅಳಿಲು ಅನ್ನುವ ಓಡಾಟ ಇದ್ದಿದ್ದೇ. ಹಾವು ಅನ್ನಲು ಸಕಾರಣ ಇದೆ. ಈ ಏರಿಯಾ ಮುಂಚೆ ಹಾವಿನ ಹುತ್ತಗಳ ಸಾಮ್ರಾಜ್ಯ ಆಗಿತ್ತಂತೆ. ಮನುಷ್ಯರು ಎಲ್ಲವನ್ನೂ ಕಬಳಿಸಿ ಮನೆ ಗಿನೆ ಕಟ್ಟಿಕೊಂಡರು. ಅವು ಎಲ್ಲಿಗೆ ಹೋಗುತ್ತವೆ? ಆಗೀಗ ಫಕ್ಕನೆ ಕಣ್ಣಿಗೆ ಬಿದ್ದು ನಡುಕ ಹುಟ್ಟಿಸುತ್ತಾವೆ. ಮಳೆ ಬಂದರೆ ಕಾಟ ಜಾಸ್ತಿ. ಬಾಗಿಲು ತೆಗೆದಿಟ್ಟುಕೊಂಡು ಕೂತು ಟೀವಿ ನೋಡುವ ಚಪಲದ ಅಮ್ಮನ ಗಮನ ತಪ್ಪಿಸಿ ಹಾವು, ಹರಣೆ ಒಳಗೆ ಬಂದರೆ ಆಶ್ಚರ್ಯವಿಲ್ಲ. ಏನು ರಾಮಾಯಣ ಆಗಿದೆಯೋ...

ಅಡುಗೆಮನೆಯಿಂದ ಅಮ್ಮನ ಕೋಣೆಗೆ ಧಾವಿಸುವಷ್ಟರಲ್ಲಿ ಮಿಂಚಿನ ವೇಗದಲ್ಲಿ ಅನ್ನುವಂತೆ ಏನೇನೆಲ್ಲಾ ನಂದಿನಿಯ ತಲೆಯೊಳಗೆ ಹಾದುಹೋಗಿತ್ತು. ಕೋಣೆಗೆ ಬಂದು ನೋಡಿದರೆ ಅಮ್ಮ ಮಂಚದ ಮೇಲೆ ನೀಟಾಗಿ ಹಾಸಿಟ್ಟಿದ್ದ ಮೇಲ್ಹಾಸನ್ನು ಮುದ್ದೆ ಮಾಡಿ ಮೂಲೆಗೆ ಹಾಕಿದ್ದಾಳೆ. ದಿಂಬನ್ನು ಎತ್ತಿ ಎತ್ತಿ ಏನೋ ಹುಡುಕಾಟ ನಡೆಸಿದ್ದಾಳೆ.

'ಏನಾಯ್ತೇ ಅಮ್ಮಾ? ನೀನೊಳ್ಳೇ ಟೆನ್ಶನ್ ಪಾರ್ಟಿ. ತಿಂಡಿ ಮಾಡೋದನ್ನ ಅರ್ಧಕ್ಕೆ ಬಿಟ್ಟು ಬಂದಿದೀನಿ. ನಿನ್ನ ಅಳಿಯನ ಸ್ನಾನ ಆಗ್ಹೋಗುತ್ತೆ ಈಗ...'

'ನಂಗೆ ಸಮಾ ನೆನಪಿದೆ ಕಣೇ, ಇಲ್ಲೇ ಇಟ್ಟಿದ್ದೆ...'

'ಏನು ಇಟ್ಟಿದ್ದಿ ಮಾರಾಯ್ತೀ, ಸರಿಯಾಗಿ ಹೇಳು...'

'ಐನೂರು ರೂಪಾಯಿ ನೋಟು. ಗುರುವಾರ ಅಲ್ವಾ, ಸಂಜೆ ಮಠಕ್ಕೆ ಹೋದಾಗ ಪೂಜೆಗೆ ಕೊಡ್ಬೇಕು ಅಂತ...'

'ಅದೇನಪ್ಪಾ ವಿಶೇಷ, ಪೂಜೆ ಮಾಡಿಸುವಂತಾದ್ದು?'

'ನಾಳೆ ನಿನ್ನ ಹುಟ್ಟಿದ ದಿನ ಅಲ್ವೇನೇ? ಚೈತ್ರಮಾಸದ ಪಂಚಮಿ ತಿಥಿ...'

'ನಿನ್ನ ಪಂಚಾಂಗ ನಂಗೊತ್ತಾಗಲ್ಲ. ತಾರೀಕು ಪ್ರಕಾರ ನನ್ನ ಹುಟ್ಟಿದ ದಿನ ನಾಳೆ ಅಲ್ವೇ ಅಲ್ಲ...'

'ನೀನು ಏನಾದ್ರೂ ಕುಣಿ. ನಾಳೆ ಪೂಜೆ ಮಾಡಿಸ್ಬೇಕು ಅಂತ...'

ಅಮ್ಮನ ಹುಡುಕಾಟ ಮುಂದುವರಿಯಿತು.

'ಐನೂರು ರೂಪಾಯಿ ಅಲ್ವಾ? ನಿಧಾನಕ್ಕೆ ಹುಡುಕು. ನನ್ನ ಮಾತ್ರ ಈಗ ನಂಬ್ಕಂಬೇಡ. ತುರಿಸಿಕೊಳ್ಳೋಕೂ ಪುರುಸೊತ್ತಿಲ್ಲ ನಂಗೆ...'

'ಅಲ್ಲ ಕಣೇ, ಕಡಿಮೆ ದುಡ್ಡಲ್ಲ. ಐನೂರು ರೂಪಾಯಿ...'

'ಎಲ್ಲೋ ಇಟ್ಟು ಮರೆತಿರ್ತೀ. ಹುಡುಕು ನೀನು. ನಿಂಗೆ ಬೇರೆ ಕೆಲಸ ಏನಿದೆ?'

'ಎಷ್ಟು ಸಸಾರಕ್ಕೆ ಹೇಳ್ತಿ. ನೀನೆಲ್ಲಾದ್ರೂ ನೋಡಿದೀಯಾ ಅಂತ ನಿನ್ನ ಕರೆದಿದ್ದು...' ಅಮ್ಮನ ಮಾತು ಮುಗಿಯುವುದರೊಳಗೆ ನಂದಿನಿ ಬಂದ ವೇಗದಲ್ಲೇ ಅಡುಗೆಮನೆ ಸೇರಿಕೊಂಡಾಗಿತ್ತು.

***

ಅಬ್ಬಬ್ಬಾ, ಒಂದು ಐನೂರು ರೂಪಾಯಿಯ ನೋಟು ಇಷ್ಟೆಲ್ಲಾ ತಲೆ ಕೆಟ್ಟು ಮೊಸರಾಗುವಂತೆ ಮಾಡುತ್ತದೆಯೆಂದು ನಂದಿನಿ ಕನಸಲ್ಲೂ ಕಲ್ಪಿಸಿಕೊಂಡವಳಲ್ಲ. ಎಂಟಲ್ಲ, ಹದಿನೈದು ದಿನ ಕಳೆದು ಹೋದರೂ ಕೂತಲ್ಲಿ, ನಿಂತಲ್ಲಿ ಅದೇ ಗಿರ. 'ಸಮಾ ನೆನಪಿದೆ ನಂಗೆ' ಎಂದು ಶುರು ಮಾಡಿದರೆ ಮೈ ಪರಚಿಕೊಳ್ಳುವಂತಾಗುತ್ತದೆ ನಂದಿನಿಗೆ.

'ಹೋಗ್ಲಿ ಬಿಡೇ, ಹೋಗ್ಲಿ ಬಿಡೇ...' ಎಂದು ಹೇಳಿ ಹೇಳಿ ಸುಸ್ತಾಗಿ ಹೋಗಿದ್ದಾಳೆ ನಂದಿನಿ. ಈ ಮನೆಗೆ ಬರುವ ಹೊರಗಿನವರು ಅಂದರೆ ಮನೆ ಕೆಲಸದಾಕೆ. ಯಾವ ದೊಡ್ಡ ಗಂಟು ಹೂತಿಟ್ಟರದಿದ್ದರೂ ಅವಳು ತಮ್ಮ ಕೋಣೆ ಗುಡಿಸುವಾಗ, ವರೆಸುವಾಗ ಅಲ್ಲೇ ಸ್ಥಾಪನೆಯಾಗಿರುತ್ತಾಳೆ ಅಮ್ಮ. ಅವಳ ಕಣ್ಣು ತಪ್ಪಿಸಿ ಕೆಲಸದವಳು ದುಡ್ಡು ತೆಗೆಯುವುದು ಅಂದರೆ ಅದು ಅಸಾಧ್ಯದ ಮಾತು. ಅಥವಾ ಅಲ್ಲಿ ದಿಂಬಿನ ಕೆಳಗೆ ದುಡ್ಡು ಇಟ್ಟಿರುತ್ತಾರೆ ಎಂದು ಅವಳಿಗೆ ಕನಸು ಬೀಳಲು ಸಾಧ್ಯವೇ?

'ಕೈಯಾಡಿಸಿ ನೋಡೋಕೇನಂತೆ? ಅವತ್ತು ಅವಳಿದ್ದಾಗ್ಲೇ ನೀನು ತಿಂಡಿಗೆ ಕರೆದಿದ್ದು...' ನಂದಿನಿಯ ಮೇಲೆ ಗೂಬೆ ಕೂತಿತು.

'ಅಮ್ಮಾ, ನಿನ್ನ ಮೊಮ್ಮಗಳು ಬಾಣಂತನಕ್ಕೆ ಬರೋ ದಿನ ಹತ್ತತ್ರ ಬಂತು. ನೀನು ಇರೋ ಕೆಲಸದೋಳನ್ನ ಅಪವಾದ ಹೊರಿಸಿ ಹೊರಗೆ ಹಾಕಿದ್ರೆ ನಾಳೆ ನನ್ನ ಹೆಣ ಬಿದ್ಹೋಗುತ್ತೆ...'

'ಬಿದ್ದು ಅನ್ನೇ. ಹೊತ್ತು ಒಂದೇ ಸಮ ಇರಲ್ಲ. ನಾನು ಮಾತಾಡಿದ್ರೆ ಸಿಟ್ಟು ಬರುತ್ತೆ ನಿಂಗೆ...'

'ಸಿಟ್ಟಲ್ಲ ಮಾರಾಯ್ತೀ. ಹೇಳಿದ್ದನ್ನೇ ಎಷ್ಟು ಸಲ ಹೇಳ್ತಿ ಅಂತ ಲೆಕ್ಕ ಇಟ್ಟಿದೀಯಾ? ನೀನು ಬರೋಕಿಂತಾ ಮುಂಚೆನಿಂದ ಅವಳು ನಮ್ಮನೇಲಿ ಕೆಲಸ ಮಾಡ್ತಿರೋಳು. ಒಂದು ಚಮಚ ಕಳುವಾದ ಉದಾಹರಣೆ ಇಲ್ಲ. ಎಷ್ಟೋ ಸಲ ಅವಳ ಮೇಲೆ ಮನೆ ಬಿಟ್ಟು ಅಂಗಡಿ ಗಿಂಗಡಿಗೆ ಹೋಗಿ ಬಂದಿದೀನಿ...'

'ಮನುಷ್ರು ಒಂದೇ ಥರ ಇರ್ತಾರೇನೇ? ಹಣ ಕಂಡ್ರೆ ಹೆಣಾನೂ ಬಾಯ್ಬಿಡುತ್ತೆ ಅಂತ ಗಾದೆ ಇಲ್ವಾ?'

'ಕಣ್ಣಿಗೆ ಬೀಳೋ ಜಾಗದಲ್ಲಿ ನೀನೇನು ಇಟ್ಟಿರ್ಲಿಲ್ವಲ್ಲ? ಕಣ್ಣಾರೆ ನೋಡ್ದೆ ಯಾರ ಮೇಲೂ ಅಪವಾದ ಹೊರಿಸ್ಬಾರ್ದು. ನೀನೇ ಎಲ್ಲೋ ಇಟ್ಟು ಮರೆತು...'

'ನಂಗಿಂತಾ ನಿಂಗೆ ಅವಳ ಮೇಲೇ ಹೆಚ್ಚು ನಂಬಿಕೆ' ಅಂದಳೇ ಹೊರತು ಅಮ್ಮ ತನ್ನ ಸಂದೇಹದ ಸುಳಿಯಿಂದ ಹೊರಬರಲಿಲ್ಲ. ಆಯ್ತು, ಅವಳು ಅಲ್ಲೇ ಬಿದ್ದು ಒದ್ದಾಡುತ್ತಿರಲಿ ಅಂದುಕೊಂಡರೆ ದಿನಕ್ಕೆ ಇಪ್ಪತ್ತು ಸಲ ಅನ್ನುವ ಹಾಗೆ ಇದನ್ನೇ ಉರು ಹಾಕುವ ಗೀಳು ಶುರುವಾಗಿಬಿಟ್ಟಿದೆ. ಅಮ್ಮ ಹೇಳಿದ್ದನ್ನೇ ಹೇಳುತ್ತಿರುತ್ತಾಳೆ ಅನ್ನುವುದು ಗೊತ್ತಿಲ್ಲದ ವಿಷಯವೇನಾಗಿಲ್ಲದಿದ್ದರೂ ಆ ಕಾಯಿಲೆ ಈ ಮಟ್ಟಕ್ಕೆ ಬೆಳೆದಿದೆಯೆಂದು ಅಂದುಕೊಂಡಿರಲಿಲ್ಲ ನಂದಿನಿ.

'ಅನ್ಯಾಯವಾಗಿ ಐನೂರು ರೂಪಾಯಿ ಹೋಯ್ತಲ್ಲೇ...' ಎಂದು ಕೂತಲ್ಲಿ, ನಿಂತಲ್ಲಿ ಕನವರಿಕೆ. 'ನೀನೇನಾದ್ರೂ ನೋಡಿದ್ಯೇನೇ?' ಎಂದು ಕೆಲಸದವಳ ಹತ್ತಿರ ಬಾಯ್ಬಿಟ್ಟು ಕೇಳುವ ಗಿರಾಕಿ ಈ ಅಮ್ಮ. ನಂದಿನಿ ಆಣೆ ಹಾಕಿಸಿಕೊಂಡಿದ್ದಾಳೆ.

'ನನ್ನಾಣೆ ಅಮ್ಮಾ, ಅವಳ ಎದುರು ನೀನು ಏನಾದ್ರೂ ವಿಚಾರಣೆ ಶುರು ಮಾಡಿದ್ರೆ ಆಮೇಲೆ ನಂಗೆ, ನಿಂಗೆ ಮಾತಿಲ್ಲ...'

'ಅದ್ಯಾಕೆ ಇಷ್ಟು ಹೆದರಿ ಸಾಯ್ತಿ ಮಾರಾಯ್ತೀ...'

'ನಿಂಗೊತ್ತಾಗಲ್ಲ ಅಮ್ಮಾ, ಕೆಲಸದೋರೂ ಸಹಾ ಅಭ್ಯಾಸ ಆಗ್ಬಿಟ್ಟಿರ್ತಾರೆ. ನಾಳೆ ಬಾಣಂತನದ ಹೊತ್ತಲ್ಲಿ ಹೆಚ್ಚಿನ ಕೆಲಸ ಮಾಡ್ಕೊಡ್ತೀನಿ ಅಂದಿದಾಳೆ, ಪಾಪ...'

'ಪಾಪ ಅಂತ ಯಾಕೆ ಹೇಳ್ತಿ?'

'ನಂಗೆ ಅವಳ ಮೇಲೆ ನೂರಕ್ಕೆ ನೂರು ನಂಬಿಕೆ ಉಂಟು, ಅದಕ್ಕೇ...'

'ಆದ್ರೂ ಅನ್ಯಾಯವಾಗಿ ಐನೂರು ರೂಪಾಯಿ...'

'ಅಮ್ಮಾ, ಜುಜುಬಿ ಐನೂರು ರೂಪಾಯಿಗೆ ನಂಗೆ ಹುಚ್ಚು ಹಿಡಿಸ್ತೀಯಾ?'

'ಹಂಗಲ್ಲ ಕಣೇ...'

'ಹಂಗೂ ಅಲ್ಲ, ಹಿಂಗೂ ಅಲ್ಲ...' ನಂದಿನಿ ಅಲ್ಲಿಂದ ಜಾಗ ಖಾಲಿ ಮಾಡಿದ್ದಳು. ಈ ಅಮ್ಮ ಎಂತಾ ವಿಚಿತ್ರದವಳು ಅನಿಸಿತ್ತು ನಂದಿನಿಗೆ. ಊರಿಂದ ಅವಳನ್ನು ಹೊರಡಿಸಿಕೊಂಡು ಬರುವಾಗ,

'ಇನ್ನು ಇಲ್ಲ್ಯಾಕೆ ಮನೆ ಇಟ್ಕಂಬೇಕು? ಮಾರ್ಬಿಡೋಣ...' ಅಂದಿದ್ದಳು.

'ಬಾಡಿಗೆಗೆ ಕೊಟ್ರಾಯ್ತು. ಈಗ್ಲೇ ಮಾರೋಕೆ ಏನು ಅವಸರ?' ಅಂದಿದ್ದಳು ನಂದಿನಿ. ಎಷ್ಟಾದರೂ ಹುಟ್ಟಿ ಬೆಳೆದ ಮನೆ. ಒಂಥರಾ ವ್ಯಾಮೋಹ.

'ಬಾಡಿಗೆಗೆ ಕೊಟ್ರೆ ದೇವ್ರೇ ಗತಿ. ಮನೆ ಹಾಳ್ಮಾಡಿಡ್ತಾರೆ ಕಣೇ...'

'ಮಾಡ್ಲಿ, ಬಾಡಿಗೆ ದುಡ್ಡಲ್ಲಿ ರಿಪೇರಿ ಮಾಡಿಸೋಕೆ ಎಷ್ಟು ಮಹಾ ಖರ್ಚಾಗುತ್ತೆ?'

'ಬೇಡ ಮಾರಾಯ್ತೀ. ಮನೆ ಬಿಡಲ್ಲ ಅಂತ ಗೂಟ